ಕರ್ನಾಟಕ ರಾಜ್ಯಪತ್ರ
ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩ Part – III | ಬೆಂಗಳೂರು, ಸೋಮವಾರ, ೧೫, ಮಾರ್ಚ್, ೨೦೨೧ (ಫಾಲ್ಗುಣ, ೨೪, ಶಕವರ್ಷ, ೧೯೪೨) BENGALURU, MONDAY, 15, MARCH, 2021 (PHALGUNA , 24, SHAKAVARSHA, 1942) | ನಂ. ೨೫೦ No. 250 |
|---|---|---|

## ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

**ಪ್ರ.ಪತ್ರ–2**

(12(2)ನೇ ನಿಯಮವನ್ನು ನೋಡಿ)

(ಗ್ರಾಮ ಪಂಚಾಯತಿಗಳಿಗೆ ಚುನಾವಣೆಗಳ ಸಂದರ್ಭದಲ್ಲಿ ಉಪಯೋಗಕ್ಕಾಗಿ)

**:: ಅಧಿಸೂಚನೆ ::**

ಸಂಖ್ಯೆ: ಚುನಾ:(ಗ್ರಾ.ಪಂ):ಸಿಆರ್/58/2020–21 ದಿನಾಂಕ:15–03–2021

(1) 1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಉಪಬಂಧಗಳ ಮೇರೆಗೆ ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ, ವಿವಿಧ ಕಾರಣಗಳಿಂದ ತೆರವಾಗಿರುವ ಗ್ರಾಮ ಪಂಚಾಯತಿಯ ಸದಸ್ಯರುಗಳ ಸ್ಥಾನಗಳನ್ನು ತುಂಬಲು;

(2) ಬೆಂಗಳೂರು ಜಿಲ್ಲೆಯ, **ಯಲಹಂಕ ತಾಲ್ಲೂಕಿನ ಚಿಕ್ಕಜಾಲ ಗ್ರಾಮ ಪಂಚಾಯಿತಿ ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನ ಆಲೂರು ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ** ಸದಸ್ಯರ ಸ್ಥಾನಗಳು ಖಾಲಿಯಾಗಿರುವ ಕಾರಣದಿಂದ, ಖಾಲಿಯಾಗಿರುವುದಾಗಿ ಘೋಷಿಸಿರುವುದರಿಂದ ಉಂಟಾದ ಖಾಲಿ ಸ್ಥಾನಗಳನ್ನು ತುಂಬಲು ಚುನಾವಣೆ ನಡೆಸಬೇಕಾಗಿರುತ್ತದೆ.

ಆದುದರಿಂದ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಗಳನ್ನು ನಡೆಸುವ) ನಿಯಮಗಳು, 1993 ರ 12ನೇ ನಿಯಮಕ್ಕನುಸಾರವಾಗಿ ಬೆಂಗಳೂರು (ನಗರ) ಜಿಲ್ಲೆಯ, **ಜಿಲ್ಲಾಧಿಕಾರಿಯಾದ ಜೆ.ಮಂಜುನಾಥ್, ಭಾ.ಆ.ಸೇ.,** ಎಂಬ ಹೆಸರಿನ ನಾನು, **ಬೆಂಗಳೂರು ಉತ್ತರ ತಾಲ್ಲೂಕಿನ ಆಲೂರು ಹಾಗೂ ಯಲಹಂಕ ತಾಲ್ಲೂಕಿನ ಚಿಕ್ಕಜಾಲ ಗ್ರಾಮ ಪಂಚಾಯಿತಿಗೆ ಚುನಾವಣೆ ನಡೆಸಲು** ಈ ಕೆಳಕಂಡ ಕಾರ್ಯಕ್ರಮ ವೇಳಾಪಟ್ಟಿಯನ್ನು ನಿಗದಿಪಡಿಸುತ್ತೇನೆ.

| ಕ್ರ.ಸಂ. | ವಿವರ | ಎರಡನೇ ಹಂತದ ದಿನಾಂಕಗಳು |
|---|---|---|
| 1. | ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ | **15–03–2021 [ಸೋಮವಾರ]** |
| 2. | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | **19–03–2021 [ಶುಕ್ರವಾರ]** |
| 3. | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | **20–03–2021 [ಶನಿವಾರ]** |
| 4. | ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ | **22–03–2021 [ಸೋಮವಾರ]** |
| 5. | ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ **(ಮತದಾನದ ಸಮಯ ಬೆಳಿಗ್ಗೆ 7.00 ರಿಂದ ಸಂಜೆ 5.00 ಗಂಟೆಯವರೆಗೆ)** | **29–03–2021 [ಸೋಮವಾರ]** |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | |
|---|---|---|
| 6. | ಮರು ಮತದಾನ ಇದ್ದಲ್ಲಿ ಮತದಾನದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಂಜೆ 5.00 ಗಂಟೆವರೆಗೆ) | **30–03–2021** [ಮಂಗಳವಾರ] |
| 7. | ಮತಗಳ ಎಣಿಕೆ ದಿನಾಂಕ ಮತ್ತು ದಿನ **(ಬೆಳಿಗ್ಗೆ 8.00 ಗಂಟೆಯಿಂದ– ತಾಲ್ಲೂಕು ಕೇಂದ್ರಗಳಲ್ಲಿ)** | **31–03–2021** [ಬುಧವಾರ] |
| 8. | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ | **31–03–2021** [ಬುಧವಾರ] |

**[ಜೆ.ಮಂಜುನಾಥ್]**
**ಜಿಲ್ಲಾಧಿಕಾರಿಗಳು ಹಾಗೂ**
**ಜಿಲ್ಲಾ ಚುನಾವಣಾಧಿಕಾರಿಗಳು**
**ಬೆಂಗಳೂರು ಜಿಲ್ಲೆ, ಬೆಂಗಳೂರು**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE